■ **ಪ. ರಾಮಕೃಷ್ಣ ಶಾಸ್ತ್ರಿ**
ಕಲೆ: ಸಂತೋಷ್ ಸಸಿಹಿತ್ಲು

# ಗುಣಕ್ಕೆ ಬೆಲೆ



ಇಬ್ಬರು ಅಕ್ಕ–ತಂಗಿ ಇದ್ದರು. ಅಕ್ಕನಿಗೆ ಬೇರೆಯವರು ಸುಖವಾಗಿರುವುದು ಕಂಡರೆ ಹೊಟ್ಟೆಕಿಚ್ಚು. ರೂಪವತಿಯಾದ ಕಿರಿಯಳು ಒಳ್ಳೆಯ ಗುಣದವಳು. ಅವರಿಗೆ ತಾಯಿ ತಂದೆ ಇರಲಿಲ್ಲ. ಆದಕಾರಣ ಅಕ್ಕ, 'ಯಾವುದಾದರೂ ಊರಿಗೆ ಹೋಗಿ ಒಳ್ಳೆಯ ಹುಡುಗನನ್ನು ಹುಡುಕಿ ಮದುವೆ ಮಾಡಿಕೊಂಡು ಸುಖವಾಗಿರೋಣ' ಎಂದು ತಂಗಿಯೊಂದಿಗೆ ಹೊರಟಳು. ಮುಂದೆ ಬಂದಾಗ ಒಬ್ಬಳು ಮುದುಕಿ ಅವರ ಬಳಿ, 'ನನಗೆ ಒಬ್ಬಳು ಮೊಮ್ಮಗಳಿದ್ದಾಳೆ. ಅವಳಿಗೆ ಮದುವೆ ನಿಶ್ಚಯವಾಗಿದೆ. ವಧುವಿಗೆ ಕೊಡಲು ನನ್ನ ಬಳಿ ಏನೂ ಇಲ್ಲ. ನೀವು ಚಿನ್ನವಿದ್ದರೆ ಕೊಡುತ್ತೀರಾ? ನಿಮಗೂ ಬಂಗಾರದಂತಹ ಗಂಡ ಸಿಗುತ್ತಾನೆ' ಎಂದು ಕೇಳಿದಳು ಮುದುಕಿ. ಅಕ್ಕ ತಿರಸ್ಕಾರದಿಂದ ಅವಳತ್ತ ನೋಡಿ, 'ನನ್ನಲ್ಲಿ ಕಿವಿಯೋಲೆ ಬಿಟ್ಟರೆ ಬೇರೆ ಏನೂ ಚಿನ್ನವಿಲ್ಲ. ಬೇಕಿದ್ದರೆ ಒಂದು ಕಬ್ಬಿಣದ ಮೊಳೆ ಕೊಡುತ್ತೇನೆ' ಎಂದು ಹೇಳಿ ಮೊಳೆಯನ್ನು ಅವಳತ್ತ ಎಸೆದಳು. ಆದರೆ ತಂಗಿ ಮರುಕದಿಂದ, 'ನನ್ನ ಬಳಿ ಚಿನ್ನ ಅಂತ ಇರುವುದು ಒಂದು ಮೂಗುಬಟ್ಟು ಮಾತ್ರ' ಎಂದು ಹೇಳಿ ಕೊಟ್ಟುಬಿಟ್ಟಳು. 'ನಿಮ್ಮ ಗುಣದಂತೆಯೇ ಜೀವನದಲ್ಲಿ ಸುಖವೂ ಸಿಗಲಿ' ಎಂದು ಹೇಳಿ ಮುದುಕಿ ಹೊರಟುಹೋದಳು.

ಅವರಿಬ್ಬರೂ ಮುಂದೆ ಬರುವಾಗ ಇಬ್ಬರು ಅಣ್ಣ ತಮ್ಮ ಹೊಲ ಉಳುತ್ತಿದ್ದರು. ಅವರು ಅಕ್ಕ ತಂಗಿಯನ್ನು ಮಾತನಾಡಿಸಿ ಎಲ್ಲಿಗೆ ಹೋಗುತ್ತಿದ್ದೀರಿ ಎಂದು ವಿಚಾರಿಸಿದರು. ಮದುವೆಯಾಗಲು ಹೋಗುತ್ತಿದ್ದಾರೆಂದು ತಿಳಿದಾಗ, 'ಇಷ್ಟವಿದ್ದರೆ ನಮ್ಮಿಬ್ಬರನ್ನು ಒಬ್ಬೊಬ್ಬರು ಮದುವೆ ಆಗಬಹುದು' ಎಂದು ಹೇಳಿದರು. 'ಗಟ್ಟಿಮುಟ್ಟಾಗಿರುವ ಕಪ್ಪಗಿನ ಮೈಯವನು ನನಗೆ ಗಂಡನಾಗಲಿ' ಎಂದು ಅಕ್ಕ ಹಿರಿಯವನನ್ನು ಆರಿಸಿದಳು. ಕಿರಿಯವನು ಬೆಳ್ಳಗಿದ್ದ. ತಂಗಿ ಅವನ ಕೈಹಿಡಿಯಲು ಒಪ್ಪಿಕೊಂಡಳು.

ಹಿರಿಯವನ ಮನೆ ಕಪ್ಪಗಿತ್ತು. ಅದರಲ್ಲಿ ಕಬ್ಬಿಣದ ವಸ್ತುಗಳು ಮಾತ್ರ ಇದ್ದವು. ಆದರೆ ಕಿರಿಯವನ ಮನೆಯಲ್ಲಿ ಉಪಕರಣಗಳು ಬಂಗಾರದಿಂದ ತಯಾರಾಗಿದ್ದವು. ಇದನ್ನು ಕಂಡು ತಂಗಿಯು ತನ್ನ ಕೈಹಿಡಿಯುವವನೊಂದಿಗೆ, 'ಇದೇಕೆ ನೀವಿರುವ ಮನೆ ಚಿನ್ನವಾಗಿದೆ?' ಎಂದು ಕೇಳಿದಳು. 'ನಮಗೆ ಹುಟ್ಟುವಾಗಲೇ ದೇವರು ಕೊಟ್ಟಿರುವ ಶಕ್ತಿ ಇದು. ನಾನು ಯಾವುದೇ ವಸ್ತುವನ್ನು ಮುಟ್ಟಿ, ಬಯಸಿದರೆ ಅದು ಚಿನ್ನವಾಗುತ್ತದೆ. ಅಣ್ಣ ಬಯಸಿದರೆ ಒಂದು ವಸ್ತು ಕಬ್ಬಿಣವಾಗುತ್ತದೆ' ಎಂದು ಅವನು ಹೇಳಿದ.

ಇದನ್ನು ತಿಳಿದು ಅಕ್ಕ ಮತ್ಸರದಿಂದ ಕುದಿದುಬಿಟ್ಟಳು. ತಂಗಿಯನ್ನು ಕರೆದು, 'ಬಾರೇ, ಮದುವೆಗೆ ಮೊದಲು ನದಿಗೆ ಹೋಗಿ ಚೆನ್ನಾಗಿ ಸ್ನಾನ ಮಾಡಿಕೊಂಡು ಬರೋಣ' ಎಂದು ಕರೆದಳು. ನದಿಗೆ ಬಂದ ತಂಗಿಯನ್ನು ನೀರಿಗಿಳಿಸಿ ಕೈಯಿಂದ ಬಲವಾಗಿ ಹಿಡಿದು ನಿಲ್ಲಿಸಿ ಇಡೀ ಮೈ ಸವೆಯುವ ಹಾಗೆ ಒರಟು ಕಲ್ಲಿನಿಂದ ತಿಕ್ಕಿ ತಿಕ್ಕಿ ಒಂದು ಮುದ್ದೆಯ ಹಾಗೆ ಮಾಡಿ ನೀರಿಗೆಸೆದಳು. ತಾನೊಬ್ಬಳೇ ಮನೆಗೆ ಬಂದು ನೀರಿನಲ್ಲಿ ತಂಗಿಯನ್ನು ಮೊಸಳೆಯೊಂದು ಎಳೆದುಕೊಂಡು ಹೋಗಿರುವುದಾಗಿ ದುಃಖ ನಟಿಸಿದಳು.

ಅಣ್ಣ ಅಕ್ಕನನ್ನು ಮದುವೆ ಮಾಡಿಕೊಂಡ. ಆದರೆ ತನ್ನ ಹೆಂಡತಿಯಾಗಬೇಕಾದವಳು ಸತ್ತುಹೋದಳೆಂದು ತಮ್ಮ ಮನೆಯ ಹೊರಗೆ ದುಃಖಿಸುತ್ತ ಕುಳಿತುಕೊಂಡ. ಆಗ ತಂಗಿ ಮೂಗುಬೊಟ್ಟು ಕೊಟ್ಟಿದ್ದ ಮುದುಕಿ ಅವನಿರುವಲ್ಲಿಗೆ ಬಂದಳು. 'ದುಃಖಿಸ ಬೇಡ, ನದಿಯ ಬಳಿಗೆ ಹೋಗಿ ಅವಳ ಹೆಸರು ಹಿಡಿದು ಕರೆ. ಬಿಳಿಯ ವರ್ಣದ ಒಂದು ಆಮೆ ನಿನ್ನ ಬಳಿಗೆ ಬರುತ್ತದೆ. ಅದನ್ನು ಮನೆಗೆ ತಂದು ನಲುವತ್ತೆಂಟು ದಿವಸ ಜೋಪಾನ ಮಾಡು. ಅದು ನಿನ್ನ ಹೆಂಡತಿಯಾಗುತ್ತದೆ' ಎಂದು ಹೇಳಿದಳು.

ತಮ್ಮ ನದಿಗೆ ಹೋಗಿ ಕೂಗಿ ಕರೆದ. ಬಿಳಿಯ ಆಮೆ ಓಡುತ್ತ ಬಂದಿತು. ಅದನ್ನು ಮನೆಗೆ ತಂದು ಸಾಕತೊಡಗಿದ. ಒಂದು ದಿನ ಅಕ್ಕ ಅಲ್ಲಿಗೆ ಬಂದಳು. ತಮ್ಮನೊಂದಿಗೆ, 'ಮೊಸಳೆ ಹಿಡಿದು ಸತ್ತವಳನ್ನು ಎಷ್ಟು ದಿನ ಕಾದು ಕುಳಿತುಕೊಳ್ಳುತ್ತೀರಿ?' ಎಂದು ಕೇಳಿದಳು. ಅದನ್ನು ಕೇಳಿ ಮನೆಯೊಳಗಿದ್ದ ಬಿಳಿಯ ಆಮೆ, 'ಅವಸರ ಮಾಡಬೇಡವೇ. ನಾನು ಸತ್ತಿಲ್ಲ, ಇನ್ನು ಸ್ವಲ್ಪ ದಿನದಲ್ಲಿ ಮೊದಲಿನ ಹಾಗೆ ಬಂದು ಇವರ ಕೈಹಿಡಿಯುತ್ತೇನೆ' ಎಂದಿತು.

ಅಕ್ಕ ತನ್ನ ಗಂಡನೊಂದಿಗೆ, 'ನನಗೆ ತಾಳಲಾಗದ ಹೊಟ್ಟೆನೋವು. ನಾನು ಬದುಕಬೇಕಿದ್ದರೆ ನಿಮ್ಮ ತಮ್ಮನ ಮನೆಯಲ್ಲಿರುವ ಬಿಳಿಯ ಆಮೆಯನ್ನು ಕೊಂದು ಅದರ ಮಾಂಸ ತಂದುಕೊಡಿ' ಎಂದಳು. ತಮ್ಮ ನಿದ್ರಿಸಿರುವಾಗ ಅಣ್ಣ ಬಂದು ಬಿಳಿಯ ಆಮೆಯನ್ನು ಹಿಡಿದು ತಂದು ಹೆಂಡತಿಯ ಇಚ್ಛೆಯನ್ನು ನೆರವೇರಿಸಿದ.

ಬೆಳಗಾಯಿತು. ಆಮೆಯನ್ನು ಕಾಣದೆ ತಮ್ಮ ಮತ್ತೆ ಶೋಕಿಸತೊಡಗಿದ. ಮುದುಕಿ ಅವನ ಬಳಿಗೆ ಬಂದಳು. ನಿನ್ನ ಅಣ್ಣನ ಮನೆಯ ಮುಂದೆ ಬಿಳಿಯ ಆಮೆಯ ಚಿಪ್ಪು ಬಿದ್ದಿದೆ.